		5	ಗುಲ್ಬರ್ಗಾ	6
		6	ಜೇವರ್ಗಿ	7
		7	ಸೇಡಂ	6
		8	ಶಹಾಪೂರ	8
		9	ಸುರಪೂರ	11
		10	ಯಾದಗೀರ	11
IV	ಕೊಪ್ಪಳ	1	ಗಂಗಾವತಿ	7
		2	ಕೊಪ್ಪಳ	7
		3	ಕುಷ್ಟಗಿ	7
		4	ಯಲಬುರ್ಗಾ	4
V	ರಾಯಚೂರು	1	ದೇವದುರ್ಗ	5
		2	ಲಿಂಗಸುಗೂರು	14
		3	ಮಾನ್ವಿ	10
		4	ರಾಯಚೂರು	9
		5	ರಾಯಚೂರು	12
	ಒಟ್ಟು			**222**

891 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲಾದ ಸೈಕಲ್‌ಗಳ ಮೊತ್ತವನ್ನು ಯಾವ ಮೂಲಗಳಿಂದ ಭರಿಸಲಾಗಿದೆ;

ಆ) ಎಷ್ಟು ಮೊತ್ತವನ್ನು ಕಳೆದ ಆರ್ಥಿಕ ವರ್ಷ ಮತ್ತು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸೈಕಲ್‌ಗಾಗಿ ಖರ್ಚು ಮಾಡಲಾಗಿದೆ (ವಿವರ ಒದಗಿಸುವುದು);

ಇ) ಸೈಕಲ್ ವಿತರಣೆಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ;

ಈ) ವಿತರಿಸಲಾದ ಸೈಕಲ್ಲಿನ ತಲಾ ಒಂದಕ್ಕೆ ನಿಗದಿಪಡಿಸಿದ ಬೆಲೆ ಎಷ್ಟು; ಸಂಸ್ಥೆವಾರು ಮೊತ್ತ ಎಷ್ಟು; ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಸೈಕಲ್ ಖರೀದಿಸಿ ವಿತರಿಸಲಾಗಿದೆ (ವಿವರ ಒದಗಿಸುವುದು);

ಉ) ಹಾಗಿದ್ದಲ್ಲಿ, ವಿತರಿಸಲಾದ ಸೈಕಲ್‌ಗಳ ಗುಣಮಟ್ಟ ಕಳಪೆಯಾಗಿ-ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯ ವಲಯ ಯೋಜನೆಯಡಿ ಭರಿಸಲಾಗಿದೆ.

ಆ) 2007-08ನೇ ಸಾಲಿಗೆ 8.68 ಕೋಟಿ ರೂ.ಗಳು, 2008-09ನೇ ಸಾಲಿಗೆ 159.69 ಕೋಟಿ ರೂ.ಗಳ ಅವಶ್ಯಕತೆಯಿದ್ದು, ಆ ಸಾಲಿನಲ್ಲಿ ಕೇವಲ 95.28 ಕೋಟಿ ರೂ.ಗಳನ್ನು ಖರ್ಚು ಮಾಡಿ ಉಳಿಕೆ ಮೊತ್ತ 64.41 ಕೋಟಿ ರೂ.ಗಳನ್ನು 2009-10ನೇ ಸಾಲಿನ ಅನುದಾನದಿಂದ ಖರ್ಚು ಮಾಡಲಾಗಿದೆ.

ಇ) ಸೈಕಲ್ ವಿತರಣೆಯನ್ನು ಬೆಂಗಳೂರು ವಿಭಾಗಕ್ಕೆ ಮೆ. ಅಟ್ಲಾಸ್ ಸೈಕಲ್ಸ್ (ಹ) ಲಿ., ಮಧ್ಯ ಪ್ರದೇಶ, ಮೈಸೂರು ವಿಭಾಗಕ್ಕೆ, ಮೆ. ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ, ಬೆಳಗಾವಿ ವಿಭಾಗಕ್ಕೆ ಮೆ. ಹೀರೋ ಸೈಕಲ್ಸ್ ಲಿ., ಮತ್ತು ಗುಲ್ಬರ್ಗಾ ವಿಭಾಗಕ್ಕೆ ಮೆ. ಏವನ್ ಸೈಕಲ್ಸ್ ಲಿ., ಸಂಸ್ಥೆಗಳಿಗೆ ನೀಡಲಾಗಿದೆ.

ಈ) ವಿತರಿಸಲಾದ ಪ್ರತಿ ಬೈಸಿಕಲ್ ದರ ರೂ.2397/- (ಎಲ್ಲಾ ರೀತಿಯ ತೆರಿಗೆಗಳು, ಶಾಲಾ ಹಂತದವರೆವಿಗೆ ಸಾಗಾಣಿಕೆ ವೆಚ್ಚ, ಜೋಡಣೆ ವೆಚ್ಚ ಸೇರಿ), ವಿವಿಧ ಸಂಸ್ಥೆಗಳಿಂದ ಖರೀದಿಸಿರುವ ಸೈಕಲ್‌ಗಳ ವಿವರ ಈ ಕೆಳಕಂಡಂತಿದೆ.

ಸಂಸ್ಥೆ ಹೆಸರು	ಹೆಣ್ಣು	ಗಂಡು	ಒಟ್ಟು
ಮೆ. ಅಟ್ಲಾಸ್ ಸೈಕಲ್ಸ್ (ಹ) ಲಿ.,	94059	96086	190145
ಮೆ. ಟಿ.ಐ.ಸೈಕಲ್ಸ್ ಆಫ್ ಇಂಡಿಯಾ,	74667	74469	149136
ಮೆ. ಹೀರೋ ಸೈಕಲ್ಸ್ ಲಿ.,	97430	105029	202459
ಮೆ. ಏವನ್ ಸೈಕಲ್ಸ್ ಲಿ.,	58492	65990	124482
ಒಟ್ಟು	**324648**	**341574**	**666222**

ಉ) ಇಲ್ಲ.

26 ಶ್ರೀ ಪಾಟೀಲ್ ಎ.ಎಸ್. (ನಡಹಳ್ಳಿ)(ದೇವರಹಿಪ್ಪರಗಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007-08, 2008-09, ಮತ್ತು 2009-10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಆರ್.ಐ.ಡಿ.ಎಫ್ ಯೋಜನೆಯಡಿಯಲ್ಲಿ ಬಿಜಾಪುರ ಜಿಲ್ಲೆಯ